ಯುವಕ ಎಂತಹ ವ್ಯಕ್ತಿಯಾಗಿರಬಹುದು ಎಂದು ಬಾಬುರಾಮನು ಯೋಚಿಸಿದನು.

ಬೆಳಗ್ಗೆ ಶ್ರೀರಾಮಕೃಷ್ಣರು ಎಂದಿನಂತೆ ಇದ್ದುದನ್ನು ಬಾಬುರಾಮ ನೋಡಿದನು. ರಾತ್ರಿಯೆಲ್ಲ ಇದ್ದ ಕಳವಳ ಈಗ ಕಾಣುತ್ತಿರಲಿಲ್ಲ, ಶಾಂತರಾಗಿದ್ದರು. ಬಾಬುರಾಮನನ್ನು ಶ್ರೀರಾಮಕೃಷ್ಣರು ಪಂಚವಟಿಗೆ ಹೋಗುವಂತೆ ಹೇಳಿದರು. ಅಲ್ಲಿಗೆ ಹೋದಾಗ, ಅದು ತನ್ನ ಬಾಲ್ಯಕಾಲದ ಕಲ್ಪನೆಯ ಗಂಗಾತೀರದ ಸುಂದರ ಉದ್ಯಾನವನದಂತೆಯೇ ಇದ್ದುದನ್ನು ನೋಡಿ ಆಶ್ಚರ್ಯಚಕಿತನಾದನು. ಬೆಳಗ್ಗೆ ಕಲ್ಕತ್ತೆಗೆ ಹಿಂತಿರುಗುವಾಗ ಶ್ರೀರಾಮಕೃಷ್ಣರು, ''ಮತ್ತೊಮ್ಮೆ ಬಾ'' ಎಂದು ಹೇಳಿದರು. ಮುಂದೆ ತಮ್ಮ ಶಿಷ್ಯರಾಗುವವರ ಮೇಲೆ ಶ್ರೀರಾಮಕೃಷ್ಣರು ಪ್ರಯೋಗಿಸುತ್ತಿದ್ದ ಪ್ರೇಮಾಸ್ತ್ರ ಇದಾಗಿತ್ತು.

ಕೇವಲ ಮೂರು ದಿನಗಳ ನಂತರ, ದಕ್ಷಿಣೇಶ್ವರಕ್ಕೆ ಬರುವಂತೆ ಶ್ರೀರಾಮಕೃಷ್ಣರು ಬಾಬುರಾಮನಿಗೆ ಹೇಳಿಕಳುಹಿಸಿದರು. ಮಾರನೇ ದಿನ ಬೆಳಗ್ಗೆ ಬಾಬುರಾಮ ದಕ್ಷಿಣೇಶ್ವರಕ್ಕೆ ಬಂದಾಗ, ಅವನಿಗೆ ಪಂಚವಟಿಗೆ ಹೋಗುವಂತೆ ಹೇಳಿದರು. ಅಲ್ಲಿ ಅವನ ಮಿತ್ರನಾದ ರಾಖಾಲ ಮತ್ತು ಪ್ರಸಿದ್ಧನಾಗಿದ್ದ ನರೇಂದ್ರ ಇದ್ದರು. ಬಾಬುರಾಮ ನರೇಂದ್ರನನ್ನು ನೋಡಿದ. ಶ್ರೀರಾಮಕೃಷ್ಣರು ತೋರುತ್ತಿದ್ದ ಅಪಾರ ಪ್ರೀತಿಗೆ ಅವನು ನಿಜವಾಗಿಯೂ ಪಾತ್ರನೆನ್ನಿಸಿತು. ಆ ಕ್ಷಣವೇ ಬಾಬುರಾಮನ ಮನಸ್ಸು ನರೇಂದ್ರನತ್ತ ಆಕರ್ಷಿತವಾಯಿತು. ಬಾಬುರಾಮನ ಶಿಷ್ಯಜೀವನ ಹೀಗೆ ಪ್ರಾರಂಭವಾಯಿತು. ಅನಂತರ ಅವನು ದಕ್ಷಿಣೇಶ್ವರಕ್ಕೆ ಆಗಾಗ್ಗೆ ಹೋಗಲಾರಂಭಿಸಿದನು. ಆಗ ಅವನ ವಯಸ್ಸು ೨೦ ವರ್ಷ. ಅವನು ಇನ್ನೂ ಹೈಸ್ಕೂಲಿನಲ್ಲಿ ಓದುತ್ತಿದ್ದ. ವ್ಯಾಸಂಗದ ಮೇಲೆ ಅವನಿಗೆ ಆಸಕ್ತಿ ಇರಲಿಲ್ಲವೆಂದು ಕಾಣುವುದು. ಶ್ರೀರಾಮಕೃಷ್ಣರನ್ನು ಭೇಟಿ ಮಾಡಿದ ಬಳಿಕ ಈ ಅನಾಸಕ್ತಿ ಇನ್ನೂ ಹೆಚ್ಚಾಯಿತು. ಅವನು ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣನಾಗಲಿಲ್ಲ. ಅದಕ್ಕೆ ಶ್ರೀರಾಮಕೃಷ್ಣರು ಏನು ಹೇಳುವರೊ ಎಂದು ಭಯಪಟ್ಟಿದ್ದ. ಆದರೆ ಅವರು ಹಾಸ್ಯವಾಗಿ, ''ಒಳ್ಳೆಯದು, ನೀನು ಪಾಸಾಗುವುದರಲ್ಲಿ ಫೇಲಾದೆ, ನೀನೀಗ ಎಲ್ಲ ಪಾಸುಗಳಿಂದ ಮುಕ್ತನಾದೆ'' ಎಂದು ಹೇಳಿದರು. (ಬಂಗಾಳಿಯಲ್ಲಿ, ಪಾಸ್ ಎಂದರೆ ಬಂಧನ ಎಂದು ಅರ್ಥ.) ಸ್ವಲ್ಪ ಕಾಲದ ನಂತರ, ಆಗಲೇ ಶ್ರೀರಾಮಕೃಷ್ಣರ ಭಕ್ತೆಯಾಗಿದ್ದ ಬಾಬುರಾಮನ ತಾಯಿ ದಕ್ಷಿಣೇಶ್ವರಕ್ಕೆ ಬಂದಳು. ಅವಳಿಗೆ ಶ್ರೀರಾಮಕೃಷ್ಣರು, ''ನನಗೆ ಏನೋ ಒಂದು ವಸ್ತು ಬೇಕಾಗಿದೆ. ಅದನ್ನು ನೀನು ಕೊಡುವೆಯಾ?'' ಎಂದು ಕೇಳಿದರು. ಅದಕ್ಕೆ ಆಕೆ, ''ಅದೇನೇ ಆದರೂ ಕೊಡುವೆ'' ಎಂದು ಹೇಳಿದಳು. ಶ್ರೀರಾಮಕೃಷ್ಣರು: ''ನಿನ್ನ ಮಗನನ್ನು ಕೊಡುವೆಯಾ? ಶುದ್ಧ ಮನಸ್ಸಿನ ಹುಡುಗನೊಬ್ಬ ಇಲ್ಲಿ ಇರಬೇಕೆಂದು ನನ್ನ ಇಚ್ಛೆ.'' ಅದಕ್ಕೆ ಉತ್ತರವಾಗಿ ಆಕೆ, ''ನೀವು ಅವನನ್ನು ಒಪ್ಪಿಕೊಳ್ಳುವುದು ಮತ್ತು ಅವನು ನಿಮ್ಮೊಡನೆ ವಾಸಿಸುವುದು ನನ್ನ ಮಹಾಭಾಗ್ಯ. ಆದರೆ, ನಾನು ಎರಡನ್ನು ಕೇಳಿಕೊಳ್ಳುತ್ತೇನೆ: ಒಂದು, ದೇವರಲ್ಲಿ ನನಗೆ ಭಕ್ತಿ ಎಂದೂ ಕುಂದದಿರಲಿ; ಮತ್ತೊಂದು, ನನ್ನ ಯಾವ ಮಕ್ಕಳೂ ನನಗಿಂತ ಮುಂಚೆ ಸಾಯದಿರಲಿ'' ಎಂದಳು. ಶ್ರೀರಾಮಕೃಷ್ಣರು ಅವಳ ಆ ಎರಡು ವರಗಳನ್ನೂ ಕರುಣಿಸಿದರು.

ಅಲ್ಲಿಂದಾಚೆಗೆ ಬಾಬುರಾಮನು ಆಗಾಗ್ಗೆ ಬಂದು ಶ್ರೀರಾಮಕೃಷ್ಣರೊಡನೆ ಇರುತ್ತ ಅವರನ್ನು ನೋಡಿಕೊಳ್ಳುತ್ತಿದ್ದನು. ಶ್ರೀರಾಮಕೃಷ್ಣರು ಆಗಾಗ್ಗೆ ಸಮಾಧಿಸ್ಥಿತಿಗೆ ಹೋಗುತ್ತಿದ್ದರು. ಆ ಸಮಯದಲ್ಲಿ ಅವರು ನಿಂತಿದ್ದರೆ, ಬೀಳುವ ಸಂಭವವಿತ್ತು. ಅಂತಹ ಸ್ಥಿತಿಯಲ್ಲಿ ಅವರನ್ನು ಸಾಮಾನ್ಯರು ಮುಟ್ಟಿದರೆ ಅವರಿಗೆ ಬಹಳ ನೋವಾಗುತ್ತಿತ್ತು. ಆದ್ದರಿಂದ ಪರಿಶುದ್ಧಾತ್ಮರಾದವರು ಅವರೊಡನೆ ಸದಾ ಇರಬೇಕಾಗುತ್ತಿತ್ತು. ಬಾಬುರಾಮ ಅವರೊಡನೆ ಇದ್ದುದರಿಂದ ಅವರಿಗೆ ಅನುಕೂಲವಾಯಿತು. ಶ್ರೀರಾಮಕೃಷ್ಣರು ಅವನನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಕೆಲವು ವೇಳೆ ಅವನು ಕಲ್ಕತ್ತೆಗೊ ಅವನ ಹಳ್ಳಿಗೊ ಹೋಗಬೇಕಾಗಿ ಬಂದರೆ ಅವರು ಅಳುತ್ತಿದ್ದರು. ಅವನು ಕಲ್ಕತ್ತೆಯಲ್ಲಿದ್ದರೆ, ತಾವೇ ಅಲ್ಲಿಗೆ ಹೋಗಿ ಸಿಹಿತಿಂಡಿಯನ್ನು ತಮ್ಮ ಕೈಯಿಂದ ತಿನ್ನಿಸುತ್ತಿದ್ದರು. ಕೆಲವೊಮ್ಮೆ ತಮಗೆ ಗಾಳಿ ಹಾಕುತ್ತಿದ್ದಾಗ ಯುವ ಶಿಷ್ಯನಿಗೆ ನಿದ್ರೆ ಬಂದುಬಿಟ್ಟರೆ, ಅವನಿಗೆ ದಿಂಬನ್ನು ಹೊಂದಿಸಿ, ತಾವು ಪಕ್ಕದಲ್ಲಿ ಕುಳಿತು ಅವನಿಗೆ ಸಮಾಧಾನ ಮಾಡಿ ಮಲಗಿಸುತ್ತಿದ್ದರು. ಭಗವದ್ಭಾವದಲ್ಲಿ ತಲ್ಲೀನರಾದವರು ಒಂದು ಸಣ್ಣ ಕೆಲಸವನ್ನು ಮಾಡಿದರೂ ಅದು ಅದ್ಭುತವೆನಿಸುವುದು. ಅದರ ಮೂಲಕ ನಮಗೆ ಭಗವಂತನ ಪ್ರೇಮದ ಅರಿವಾಗುವುದು. ಅಂತಹ ಪ್ರೀತಿಯನ್ನು ನಾನು ಶ್ರೀರಾಮಕೃಷ್ಣರ ಅನೇಕ ಪ್ರಮುಖ ಶಿಷ್ಯರಿಂದ ಅನುಭವಿಸಿರುವೆನು.

ಮುಂದೆ ಸ್ವಾಮಿ ಪ್ರೇಮಾನಂದರು ಹೇಳುತ್ತಿದ್ದರು: ''ಶ್ರೀರಾಮಕೃಷ್ಣರು ಸುಮ್ಮನೆ ನಮ್ಮ ಹೃದಯವನ್ನು ಗೆದ್ದುಬಿಡುತ್ತಿದ್ದರು! ಅವರು ವಿನೋದಪ್ರಿಯರು. ಅವರೊಂದಿಗೆ ಇರುವುದಕ್ಕೆ ಆನಂದವಾಗುತ್ತಿತ್ತು, ಸದಾ ಅವರೊಂದಿಗೆ ಇರಬೇಕೆನಿಸುತ್ತಿತ್ತು. ಅವರು ನಮ್ಮ ಮೇಲೆ ಹರಿಸುತ್ತಿದ್ದ ಪ್ರೇಮಕ್ಕೆ ಹೋಲಿಸಿದರೆ, ತಂದೆತಾಯಿಗಳ ಪ್ರೇಮ ಅದರ ಹತ್ತಿರಕ್ಕೂ ಬರಲಾಗುತ್ತಿರಲಿಲ್ಲ. ಸಣ್ಣ ವಯಸ್ಸಿನ ಹುಡುಗರಾಗಿದ್ದ ಆ ಕಾಲದಲ್ಲಿ ನಾವು ನಿಜವಾಗಿಯೂ ಭಗವಂತನಿಗೆ ಹುಚ್ಚರಾಗಿ ಹೋಗಿದ್ದೆವೆಂದು ಭಾವಿಸಿದಿರಾ? ಅಂಥದ್ದೇನೂ ಇಲ್ಲ. ನಾವು ಶ್ರೀರಾಮಕೃಷ್ಣರ ಪ್ರೀತಿ ವಿಶ್ವಾಸಗಳಲ್ಲಿ ಮುಳುಗಿಹೋಗಿದ್ದೆವು.''

ಶ್ರೀರಾಮಕೃಷ್ಣರಿಗೆ ಸ್ವಾಮಿ ಪ್ರೇಮಾನಂದರ ಬಗ್ಗೆ ಅನೇಕ ದರ್ಶನಗಳಾಗಿದ್ದುವು. ಅವರು ಭಗವಂತನ ಆನಂದದ ಅಂಶವೆಂದು ಹೇಳುತ್ತಿದ್ದರು. ''ಬಾಬುರಾಮನನ್ನು, ಕತ್ತಿನಲ್ಲಿ ಹಾರವನ್ನು ಧರಿಸಿ, ಇಬ್ಬರು ಸಖಿಯರು ಪಕ್ಕದಲ್ಲಿ ನಿಂತಿರುವ ದೇವತೆಯಂತೆ ಕಂಡೆ'' ಎಂದು ಒಮ್ಮೆ ಶ್ರೀರಾಮಕೃಷ್ಣರು ಹೇಳಿದರು. ಆ ದೇವತೆ, ಶ್ರೀಕೃಷ್ಣನ ಪ್ರಿಯೆಯಾದ ರಾಧೆ. ತಾತ್ತ್ವಿಕವಾಗಿ ಹೇಳುವುದಾದರೆ ರಾಧೆ, ಬ್ರಹ್ಮನ ಲೀಲೆಯ ಒಂದು ಭಾಗ. ಹೇಗೆ ಬ್ರಹ್ಮ ಸತ್ ಚಿತ್ ಆನಂದನೊ, ಹಾಗೆಯೇ ಅವನ ಲೀಲೆಯಲ್ಲಿಯೂ ಈ ಮೂರು ಅಂಶಗಳು ಇವೆ. ಬ್ರಹ್ಮನ ಆನಂದ ಅಥವಾ ಪ್ರೇಮದ ಅಂಶವೇ ರಾಧೆ – ಭಗವಂತನ ಪ್ರೇಮಶಕ್ತಿ. ('ರಾಧೆ ಪ್ರೇಮಸಾಗರದ ಮೇಲಣ ನೊರೆ' ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಗಮನಿಸಿ, ಬ್ರಹ್ಮನೆಂಬ ಸಾಗರ ಸಣ್ಣ ಆಕಾರವನ್ನು ಪಡೆದಿದೆ.)

*(ಮುಂದುವರಿಯುವುದು)* *